


ಹೀರುತ್ತಿದೆ ಒಂದೇ ಸಮ ಮಕರಂದವನು. ಪುಟ್ಟಹೈದನ ಬೆರಳು ಬೆರಗು. ಪಕ್ಷಿಕಣ್ಣ ಒಳಗೆ ಹಾರಿ ಬಂದು ಆಕಾಶವಾಗಿದೆ.

ಅವಳು ಆಶ್ಚರ್ಯದಿಂದ ಪ್ರತಿಕ್ರಿಯಿಸಿದ್ದನ್ನು ಅನ್ಯಮನಸ್ಕನಂತೆ ಕೇಳಿಸಿಕೊಂಡ. ಅವನ ಮನಸ್ಸಿನ ತುಂಬಾ ತಾನು ಬರೆದ ಕತೆಯ ದೃಶ್ಯಗಳು ಬಂದು ಹೋಗುತ್ತಿದ್ದವು.

ಗುಂಪು ಕಲೆತಿದೆ. ನೀಲಿ ನೊಣ. ಹಿಂಡು ಹಿಂಡು. ಕಲೆತಿರುವವರ ಮೂಗಿಗೆ ರಪ್ಪಂತ ಹರಿದು ನಿಂತಿರುವ ರಕ್ತವನ್ನು ನಾಯಿಗಳು ಕಾದಾಡಿಕೊಂಡು ನೆಕ್ಕುತ್ತಿವೆ. ಪಕ್ಕದಲ್ಲಿ ವಾಹನಗಳು ಹೋಗುತ್ತಿವೆ. ಕಿಟಕಿಗಳಿಂದ ತಲೆಗಳನ್ನು ಹೊರ ಹಾಕಿ ನೋಡುವುದರೊಳಗೆ ದೃಶ್ಯ ಸರಿಯುತ್ತಿದೆ ಹಿಂದಕ್ಕೆ. ಮಾತು ಮಾತು ಮಾತು. ಏನೊಂದೂ ಸ್ಪಷ್ಟವಾಗಿ ಕೇಳಿಸುತ್ತಿಲ್ಲ. ಹುಷಾರು ಅವರು ನರ ಹಂತಕರು. ಬಿಟ್ಟು ಬಿಡು ಆ ಹೂವು ಬೇಡ, ಅಡವಿಯಲ್ಲಿ ಬೇಕಾದಷ್ಟು ಹೂವು ಹೂವೇ. ಶವಕ್ಕಂತ ದೇವರಿಗಂತ ಬೇರೆ ಬೇರೆ ಇರಲ್ಲ ಈ ಸೃಷ್ಟಿಯಲ್ಲಿ. ಇದೆಲ್ಲ ನಾವು ಮಾಡಿಕೊಂಡಿರೋದು. ಅಲ್ಲೊಂದು ಕೆಂಪು ಕಣಗಿಲೆ. ಅಯ್ಯೋ ಹೇಳಿದ ಒಂದು ಸೊಲ್ಲೂ ಕೇಳ್ಲಿಲ್ಲ. ನಿಮ್ಮಪ್ಪ ರಕ್ತ ಕೊಟ್ಟು ಉಳಿಸಿಕೊಂಡ ನಿನ್ನ.

ಎಂದೋ ಕೇಳಿದ್ದು, ಎಂದೋ ಕಂಡಿದ್ದು ಅವನ ವಾಸ್ತವದ ಇರುವಿಕೆಯೊಳಗೆ ಕೊಲಾಜು.

'ಮೊಬೈಲ್ ಅಲ್ಲಿಡು'.

'ಹೇಳಿದೆ ಇಂಟರ್ ನೆಟ್ ಇರುವ ಮೊಬೈಲ್ ಬೇಡ ಅಂತ'.

'ಕಾಲ ನಾವು ಎಲ್ಲಿಗೆ ಹೋದರೂ ಬಿಡಲ್ಲ. ನಮ್ಮನ್ನು ಅದು ತನ್ನ ತೆಕ್ಕೆಗೆ ಎಳೆದುಕೊಳ್ಳುತ್ತೆ'.

'ಎಲ್ಲದಕ್ಕೂ ಸಮರ್ಥನೆ. ಮೊಬೈಲ್ ಅಲ್ಲಿಟ್ಟು, ಜೋಕಾಲಿ ಆಡು ಹೋಗು, ನಾನೇ ತೂಗ್ತೀನಿ ಬಾ'.

ಚುರುಮುರಿ, ಮಿರ್ಚಿ ತಿಂದು, ಒಂದು ಪೊಟ್ಟಣವನ್ನು ಹಿಡಿದುಕೊಂಡು ನಡೆದರು. ಪಕ್ಕದಲ್ಲಿ ಉದ್ಯಾನವನ. ಖಾಲಿ ಜೋಕಾಲಿ ಹಿಂದಕ್ಕೆ ಮುಂದಕ್ಕೆ ಗಾಳಿಯ ಜೊತೆ.

